ದಿನಗಳ ಬಳಿಕ ಅವಳು ವಿವೇಕಾನಂದರ ದರ್ಶನ ಪಡೆದುಕೊಂಡಳು. ಆಗ ಅವಳು, "ಸ್ವಾಮಿ, ನೀವು ಬೋಧಿಸಿದ ಧರ್ಮ ನನಗೆ ಅನುಕೂಲಕರವಾಗಿರಲಿಲ್ಲ, ಆದ್ದರಿಂದಲೇ ನಾನು ಸತ್ಸಂಗಕ್ಕೆ ಬರುವುದನ್ನು ನಿಲ್ಲಿಸಿಬಿಟ್ಟೆ. ಈಗ ನನಗೆ ಅನುಕೂಲಕರವಾದ ಧರ್ಮವನ್ನು ಹೇಳಿಕೊಡಿ" ಎಂದು ಕೇಳಿಕೊಂಡಳು. ಆಗ ವಿವೇಕಾನಂದರು, "ಅನುಕೂಲಕರವಾದ ಧರ್ಮ ಯಾವುದೆಂದು ನನಗೆ ಇದುವರೆಗೂ ಅರ್ಥವಾಗಿಲ್ಲ. ನನಗೆ ಅಂತಹ ಧರ್ಮವನ್ನು ಯಾರೂ ಬೋಧಿಸಿಯೂ ಇಲ್ಲ. ನಾವು ಸತ್ಯವನ್ನೇ ಬಯಸುವುದಾದರೆ ಅದು ಅನುಕೂಲವೋ ಪ್ರತಿಕೂಲವೋ ಎಂಬುದನ್ನು ತರ್ಕಿಸುತ್ತ ಕುಳಿತುಕೊಳ್ಳುವಂತಿಲ್ಲ. ಸತ್ಯವು ಕೆಲವು ವೇಳೆ ನಮಗೆ ಆಘಾತವನ್ನೇ ನೀಡುತ್ತದೆ. ಆ ಮಾತು ಹಾಗಿರಲಿ, 'ಅನುಕೂಲಕರವಾದ ಧರ್ಮ' ಎಂದು ಹೇಳುತ್ತಿದ್ದೀಯಲ್ಲ, ನಿನ್ನ ಅಭಿಪ್ರಾಯದಲ್ಲಿ ಅದು ಹೇಗಿರಬೇಕೆಂಬುದನ್ನು ನನಗೆ ಹೇಳು" ಎಂದು ಪ್ರಶ್ನಿಸಿದರು.

ಆಗ ಆ ಮಹಿಳೆಯು, "ನಾನು ನನ್ನ ಮಕ್ಕಳಲ್ಲಿ, ನನ್ನ ಆಸ್ತಿಪಾಸ್ತಿಗಳಲ್ಲಿ, ನನ್ನ ವಜ್ರವೈಡೂರ್ಯಗಳಲ್ಲಿ ದೇವರನ್ನು ಕಾಣಲು ಆಸೆಪಡುತ್ತೇನೆ. ಅಂತಹ ಮಾರ್ಗವನ್ನು ನನಗೆ ತಿಳಿಸಿಕೊಡಿ" ಎಂದು ಕೇಳಿದಳು. ಆಗ ಸ್ವಾಮೀಜಿಯವರು, "ನಿನ್ನ ಅಭಿಪ್ರಾಯ ಈಗ ನನಗೆ ಅರ್ಥವಾಯಿತು. ನೀನು ಯಾವುದರ ಮೂಲಕ ದೇವರನ್ನು ಕಾಣಬೇಕೆಂದಿರುವೆಯೋ, ಆ ಎಲ್ಲ ಸೌಭಾಗ್ಯಗಳೂ ಈಗ ನಿನ್ನ ಬಳಿ ಸಮೃದ್ಧವಾಗಿವೆ. ಇನ್ನು ಮುಂದೆಯೂ ಅವು ನಿನ್ನ ವಶದಲ್ಲಿರುತ್ತವೆ. ಮುಂದಿನ ನಿನ್ನ ಏಳೇಳು ಜನ್ಮಗಳಲ್ಲಿಯೂ ಸಾವಿರಾರು ವರ್ಷಗಳ ಪರ್ಯಂತವೂ ನೀನು ಅವುಗಳನ್ನು ನೋಡುತ್ತ, ಅವುಗಳ ಮಧ್ಯದಲ್ಲಿಯೇ ಇರುತ್ತೀಯೆ. ಆದರೆ ಅವುಗಳ ಸಂಪರ್ಕದಲ್ಲಿರುವವರೆಗೆ ಮಾತ್ರ ನೀನು ದೇವರನ್ನು ಕಾಣಲಾಗುವುದಿಲ್ಲ. ಅನಂತರ ಎಂದೋ ಒಂದು ದಿನ, ನಿನ್ನ ಬದುಕಿನಲ್ಲಿ ಏನೋ ಒಂದು ಆಘಾತವುಂಟಾಗಿ ನಿನ್ನಲ್ಲಿ ವಿವೇಕೋದಯವಾಗುತ್ತದೆ. ಈ ಮಕ್ಕಳು, ಈ ಸಂಪತ್ತು, ಈ ವಜ್ರಗಳಿಂದ ನಾನು ದೇವರನ್ನು ಕಾಣಲಾಗುವುದಿಲ್ಲ ಎಂಬುದು ಆಗ ನಿನಗೇ ಮನವರಿಕೆಯಾಗಿಬಿಡುತ್ತದೆ. ಅಲ್ಲಿಯವರೆಗೆ ನೀನು ನಿನ್ನ ಮಕ್ಕಳಲ್ಲೇ, ನಿನ್ನ ಐಶ್ವರ್ಯದಲ್ಲೇ, ನಿನ್ನ ನೃತ್ಯಗೀತಗಳಲ್ಲೇ ದೇವರನ್ನು ಕಾಣುತ್ತಿರು" ಎಂದು ತಿಳಿಸಿಕೊಟ್ಟರು.

"ಈ ಜನರು ಒಂದು ರೂಢಿಗೆ ಬದ್ಧರಾಗಿದ್ದಾರೆ. ಅದರಿಂದ ಹೊರಬರುವ ಧೈರ್ಯ ಅವರಿಗಿಲ್ಲ. ಸತ್ಯವನ್ನು ಸೇರುವ ಹಂಬಲ ಅವರಿಗಿಲ್ಲ. ಸತ್ಯವೇ ತಮ್ಮೆಡೆಗೆ ಬರಬೇಕು, ಸತ್ಯವೇ ತಮ್ಮ ಭಾವನೆಗೆ ಅನುಗುಣವಾಗಿ ಹೊಂದಿಕೊಳ್ಳಬೇಕು ಎಂದು ಅವರು ಬಯಸುತ್ತಾರೆ. ಅಂತಹವರು ಮುಕ್ತಿಗೆ ಬಹಳ ದೂರದಲ್ಲಿರುತ್ತಾರೆ. ನಮ್ಮ ಆದರ್ಶವೇನೆಂಬುದನ್ನು ನಾವೇ ನಿರ್ಧರಿಸಿಕೊಂಡು, ಸಾಯುವವರೆಗೂ ಅದನ್ನೇ ಧೈರ್ಯದಿಂದ ಅನುಸರಿಸಬೇಕು. ಅದೇ ಮುಕ್ತಿಗೆ ಹಾದಿ. ಅರೆಮನಸ್ಸಿನಿಂದ ಏನನ್ನೂ ಸಾಧಿಸಲಾಗುವುದಿಲ್ಲ" ಎಂದು ವಿವೇಕಾನಂದರು ಈ ವೃತ್ತಾಂತದ ಮುಕ್ತಾಯದಲ್ಲಿ ಮನೋಜ್ಞವಾಗಿ ಹೇಳಿದ್ದಾರೆ.

## ಖಗೋಳಶಾಸ್ತ್ರ ಮತ್ತು ಕೊಬ್ಬರಿಮಿಠಾಯಿ

ಆದಿ ಅಂತ್ಯಗಳಿಲ್ಲದ ಜೀವನಿಗೂ ಆದಿ ಅಂತ್ಯಗಳಿಲ್ಲದ ದೇವನಿಗೂ ಇರುವ ಶಾಶ್ವತಸಂಬಂಧವನ್ನು ಧರ್ಮವೆನ್ನುತ್ತೇವೆ. ಧರ್ಮವೆಂದರೆ ಅದು ಅತೀತದ ಅನ್ವೇಷಣೆಯೇ ಆಗಿದೆ, ದೇವರನ್ನು ತಿಳಿಯುವ ವಿಚಾರವೇ ಆಗಿದೆ. ಅತೀತದ ಅನ್ವೇಷಣೆ ಮಾಡದಿದ್ದರೆ ಮಾನವನ ಜೀವನವೊಂದು ಮರಳುಗಾಡಾಗುತ್ತದೆ. ನಾವು ಈಗಿರುವ ಸ್ಥಿತಿಯಲ್ಲಿಯೇ ತೃಪ್ತರಾಗಿ, ಅತೀತದ ಅನ್ವೇಷಣೆಯನ್ನು ತೊರೆದುಬಿಟ್ಟರೆ, ಪುನಃ ಪ್ರಾಣಿಗಳ ಸ್ಥಿತಿಗೇ ಹೊರಟುಹೊಗುತ್ತೇವೆ. ಮಾನವನೊಬ್ಬ ಮಾತ್ರವೇ ಮೇಲೆ ನೋಡಬಲ್ಲ. ಮಿಕ್ಕ ಪ್ರಾಣಿಗಳೆಲ್ಲ ಕೆಳಗೆ ನೋಡುತ್ತವೆ. ಅತೀತದ ಅನ್ವೇಷಣೆಯೆಂದರೆ ಅದು ಮೇಲೆ ನೋಡಬಲ್ಲ ಗುಣ, ಅದೇ ಮೋಕ್ಷ, ಅದೇ ಮಾನವನ ಶ್ರೇಯಸ್ಸಿನ ಮಾರ್ಗ. ಅದು ಮಾನವ ಕೋಟಿಯನ್ನು ಮುಂದೊಯ್ಯುವ ಕ್ರಿಯೋತ್ತೇಜಕ ಶಕ್ತಿ. ಅದರಿಂದಾಗುವ ಉಪಯೋಗ ಬರಿಗಣ್ಣಿಗೆ ಕಾಣುವಂಥದಲ್ಲ. ಅದು ಮಾನವನ ಬದುಕಿಗೆ ಶ್ರದ್ಧೆಯನ್ನೂ ಉತ್ಸಾಹವನ್ನೂ ತುಂಬುತ್ತದೆ.

ಒಂದು ಸಭಾಂಗಣದಲ್ಲಿ ಖಗೋಳಶಾಸ್ತ್ರವನ್ನು ಕುರಿತ ವಿಚಾರಗೋಷ್ಠಿಯೊಂದು ನಡೆಯುತ್ತಿತ್ತು. ಖಗೋಳವಿಜ್ಞಾನಿಯೊಬ್ಬನು ಆ ಶಾಸ್ತ್ರಕ್ಕೆ ಸಂಬಂಧಿಸಿದ ಲೆಕ್ಕವೊಂದನ್ನು ವಿವರಿಸುತ್ತಿದ್ದನು. ಆ ಹೊತ್ತಿನಲ್ಲಿ ಆ ಸಭೆಯಲ್ಲಿದ್ದ ಒಬ್ಬ ಪುಟ್ಟ ಬಾಲಕನು ಎದ್ದುನಿಂತು, "ನೀವು ವಿವರಿಸುತ್ತಿರುವ ಲೆಕ್ಕದಿಂದ ನನಗೆ ಏನು ಪ್ರಯೋಜನವಾಗುತ್ತದೆ, ಸಾರ್" ಎಂದು ಕೇಳಿದನು. ಆಗ ವಿಜ್ಞಾನಿಯು "ಯಾವ ಪ್ರಯೋಜನವಾಗಬೇಕೆಂದು ನೀನು ಬಯಸುತ್ತೀಯೆ ಹೇಳು ಮುದ್ದು ಬಾಲಕನೇ" ಎಂದು ಪ್ರಶ್ನಿಸಿದನು. ಆಗ ಆ ಬಾಲಕನು, "ಈ ಲೆಕ್ಕವನ್ನು ತಿಳಿದುಕೊಂಡರೆ ನನಗೆ ಕೊಬ್ಬರಿಮಿಠಾಯಿ ಸಿಕ್ಕಬೇಕು ಸಾರ್" ಎಂದು ಹೇಳಿದನು. ವಿಜ್ಞಾನಿಯು "ಅದು ಸಿಗಲಾರದು" ಎಂದು ಹೇಳಿದಾಗ, ಬಾಲಕನು "ಹಾಗಾದರೆ ನಿಮ್ಮ ಲೆಕ್ಕದಿಂದ ಏನೂ ಪ್ರಯೋಜನವಿಲ್ಲ" ಎಂದು ತನ್ನ ತೀರ್ಮಾನವನ್ನು ಹೇಳಿಬಿಟ್ಟನು. ಅತೀತದ ಅನ್ವೇಷಣೆಯೂ ಹೀಗೆಯೇ, "ಅದರಿಂದ ಏನು ಪ್ರಯೋಜನ, ಅದು ದರಿದ್ರನ ಬಡತನವನ್ನು ಹೋಗಲಾಡಿಸಬಲ್ಲದೇ" ಎಂದು ನಾವು ಕೇಳಿಬಿಡುತ್ತೇವೆ.

ಮಕ್ಕಳು ಕೇವಲ ತಮ್ಮ ದೃಷ್ಟಿಯಿಂದ ಪ್ರಪಂಚವನ್ನು ಅಳೆಯುತ್ತವೆ. ದೊಡ್ಡವರೂ ಹಾಗೆಯೇ ಮಾಡಿದರೆ "ಬಾಲಬುದ್ಧಿಯ ದೊಡ್ಡವರು" ಎಂದೆನಿಸಿಕೊಳ್ಳುತ್ತೇವೆ. ನಾವು ದೇವರೆಂಬ ಪರವಸ್ತುವನ್ನು ಲೌಕಿಕಲಾಭದ ದೃಷ್ಟಿಯಿಂದ ಅಳೆಯಬಾರದು. ಪ್ರತಿಯೊಂದನ್ನೂ ಅದರದರ ಪ್ರಮಾಣದಿಂದಲೇ ಅಳೆಯಬೇಕು. ಪೂರ್ಣತೆಯೆಂಬುದು ಮಾನವನ ಬಾಳಿನಲ್ಲಿ ಓತಪ್ರೋತವಾಗಿದೆ. ಅದು ಈಗಿನ ಜೀವನದಲ್ಲಿ ಮಾತ್ರವಲ್ಲ, ನಮ್ಮ ಭೂತಭವಿಷ್ಯತ್‌ವರ್ತಮಾನ ಮುಂತಾದ ಕಾಲಗಳನ್ನೆಲ್ಲ ಹಾಸುಹೊಕ್ಕಾಗಿ ನೆಯ್ದುಕೊಂಡಿದೆ. ನಾವು ನಮ್ಮ ಮೂರುದಿನದ ಬಾಳಿನ ದೃಷ್ಟಿಯಿಂದ ಅದರ ಪ್ರಭಾವವನ್ನು ಅಳೆಯಬಾರದು.

# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ.ಆರ್. ಮೋಹನ್



### ಛಾಯಾಚಿತ್ರ ೪೫

ಲಂಡನ್ನಿನ ರೀಜೆಂಟ್ ರಸ್ತೆಯಲ್ಲಿನ ವಾಲ್ಟರಿ ಫೋಟೋಗ್ರಾಫರ್ಸ್ ಎಂಬ ಸ್ಟುಡಿಯೊದಲ್ಲಿ ತೆಗೆದ ಆರು ಚಿತ್ರಗಳಲ್ಲಿ ಇದೂ ಒಂದು. ಸ್ವಾಮೀಜಿ ನ್ಯೂಯಾರ್ಕಿನಲ್ಲಿ ಮಾಡಿದಂತೆ ಇಂಗ್ಲೆಂಡಿನಲ್ಲಿಯೂ ವಿಶ್ರಾಂತಿಯಿಲ್ಲದೆ ನಿರಂತರವಾಗಿ ಪರಿಶ್ರಮ ಪಟ್ಟರು. ತಮ್ಮ ಬೋಧನೆಗಳನ್ನು ಮತ್ತು ವ್ಯಕ್ತಿತ್ವವನ್ನು ಅರಿತು



ಚಿತ್ರ : ೪೫

ಅಲ್ಲಿನ ಜನ ಒಪ್ಪಿಗೆ ಸೂಚಿಸುವುದನ್ನು ಕಂಡು ಸ್ವಾಮೀಜಿಯವರಿಗೆ ತುಂಬಾ ಸಮಾಧಾನವಾಯಿತು. ಲಂಡನ್ನಿನ ಪ್ರಿನ್ಸೆಸ್ ಹಾಲ್‌ನಲ್ಲಿ ಭಾಷಣ ಮಾಡಿದ ಮೇಲೆ ಅವರು ಇಂಗ್ಲೆಂಡಿನಲ್ಲಿ ತಮ್ಮ ಮುಂದಿನ ಪ್ರಚಾರಕಾರ್ಯಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿದರು. ಹಾಗೆಯೇ ಈ ಅವಧಿಯಲ್ಲಿ ಅವರು ತಮ್ಮ ಸಂದರ್ಶನಕ್ಕೆ ಬಂದ ಪ್ರತಿಯೊಬ್ಬರ ಮೇಲೂ ಅಚ್ಚಳಿಯದ ಪ್ರಭಾವವನ್ನು ಬೀರಿದ್ದರು.

### ಛಾಯಾಚಿತ್ರ ೪೬

ಲಂಡನ್ನಿನ ಸ್ಟುಡಿಯೋದಲ್ಲಿ ತೆಗೆದ ೬ ಚಿತ್ರಗಳಲ್ಲಿ ಇದೂ ಒಂದು. ಸ್ವಾಮೀಜಿಯವರ ಪ್ರತಿಯೊಂದು ಉಪನ್ಯಾಸವೂ ಪಾಶ್ಚಾತ್ಯ ಶ್ರೋತೃಗಳಿಗೆ ಅತ್ಯಂತ ಜ್ಞಾನಪ್ರದವಾಗಿತ್ತು. ಅವುಗಳಲ್ಲಿ ಕೆಲವು ತುಂಬಾ ಸ್ಫೂರ್ತಿ ನೀಡುವಂತಿದ್ದವು. ಯಾವುದಾದರೊಂದು ವಿಷಯವನ್ನು ಸ್ವಾಮೀಜಿ ತನ್ಮಯತೆಯಿಂದ ವಿವರಿಸತೊಡಗಿದರೆಂದರೆ ಅವರ ಮುಖದಲ್ಲಿ ವ್ಯಕ್ತವಾಗುತ್ತಿದ್ದ ಭಾವೋದ್ವೇಗ ಅಥವಾ ಅಪಾರಶಕ್ತಿಯ ಸ್ಫುರಣದಿಂದ ಹೊರಹೊಮ್ಮುತ್ತಿದ್ದ ತೇಜಸ್ಸು ಶ್ರೋತೃಗಳನ್ನು ಮೋಡಿ ಮಾಡುತ್ತಿದ್ದವು.



ಚಿತ್ರ : ೪೬

ಈ ಬಗ್ಗೆ ಸ್ವಾಮೀಜಿ ತಮ್ಮ ಒಂದು ಪತ್ರದಲ್ಲಿ ಹೀಗೆ ಹೇಳುತ್ತಾರೆ: "ಸಾರ್ವಜನಿಕ ಉಪನ್ಯಾಸಗಳಲ್ಲದೆ ವಾರಕ್ಕೆ ೮ ತರಗತಿಗಳನ್ನು ನಿಯಮಿತವಾಗಿ ತೆಗೆದುಕೊಳ್ಳುತ್ತಿದ್ದೆ. ಆ ತರಗತಿಗಳಲ್ಲಿ ಜನ ಕಿಕ್ಕಿರಿದು ನೆರೆಯುತ್ತಿದ್ದರು. ಉನ್ನತ ವರ್ಗದ ಮಹಿಳೆಯರು ನೆಲದ ಮೇಲೆ ಕಾಲು ಮಡಿಸಿಕೊಂಡು ಕುಳಿತಿರುತ್ತಿದ್ದರು. ಆದರೂ ಈ ಬಗ್ಗೆ ಆ ಮಹಿಳೆಯರು ಅನ್ಯಥಾ ಭಾವಿಸುತ್ತಿರಲಿಲ್ಲ."

### ಛಾಯಾಚಿತ್ರ ೪೭

ಯೂರೋಪಿನ ಪ್ರವಾಸ ಮುಗಿಸಿ ಸ್ವಾಮೀಜಿ ೧೮೯೬ರ ಸೆಪ್ಟೆಂಬರ್ ತಿಂಗಳಿನಲ್ಲಿ ವಾಪಸ್ಸು ಬಂದರು. ಬಹುಶಃ ಈ ಸಂದರ್ಭದಲ್ಲಿ ತೆಗೆದ ಚಿತ್ರ ಇದು.

"ನಮ್ಮ ವಿದ್ವತ್ತಿನ ಶಕ್ತಿಯಿಂದ ಈ ಜನರನ್ನು ನಾವು ಗೆದ್ದುಕೊಳ್ಳಬೇಕು. ನಿಮ್ಮ ವೈರಾಗ್ಯದ ಮಾತು ಅವರ ತಲೆಗೆ ಹತ್ತುವುದಿಲ್ಲ. ಅವರಿಗೆ ಅರ್ಥವಾಗುವುದೇನಿದ್ದರೂ ವಿಶಾಲ